ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು
ಸರಸಿಂಹರಾಜು ರಸ್ತೆ, ಬೆಂಗಳೂರು-560002

ಸಂ:ಆ/ಪಿಆರ್/ /2016-17 ದಿನಾಂಕ: 19/10/16
ನಿಸಾ (4) ಕೆಡಿಇ 16.14

ಅಂತರಿಕ ಕಛೇರಿ ಟಿಪ್ಪಣಿ

ವಿಷಯ:-ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸರ್ಕಾರದ ಆದೇಶದಂತೆ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸುವ ಬಗ್ಗೆ.

ಉಲ್ಲೇಖ:-1.ಪತ್ರ ಸಂ.ಆ/ಪಿಆರ್/1349/2015-16 ದಿ.09.07.2016
2.ಸರ್ಕಾರದ ಆದೇಶ ಸಂಖ್ಯೆ/ಆಇ751 ವೆಚ್ಚ-12/16 ದಿ.07.09.2016
3.ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಕರ್ನಾಟಕ ಸರ್ಕಾರ ಇವರ ಆದೇಶ ಸಂ.ನಆಇ/497/ಎಮ್ಎನ್ವೈ/2016/(ಭಾಗ-1) ದಿ.26.09.2016

****

ಮೇಲ್ಕಂಡ ಉಲ್ಲೇಖ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರೂರಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್ಮೆಂಟ್ ಲಿಮಿಟೆಡ್ (ಕೆಆರ್ಐಡಿಎಲ್ ಹಿಂದಿನ ಕೆಐಎಡಿಬಿ) ನೇರವಾಗಿ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳ ಕಾಮಗಾರಿಗಳನ್ನು ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿ ಸರ್ಕಾರವು ಉಲ್ಲೇಖ-2ರನ್ವಯ ಅಧಿಸೂಚನೆ ಜಾರಿ ಮಾಡಿರುತ್ತದೆ. ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ವಿಕಾಸ ಸೌಧ ಬೆಂಗಳೂರು ರವರು ಉಲ್ಲೇಖ ಪತ್ರ (3) ರಲ್ಲಿ ಬೃಹತ್ ಮಹಾನಗರ ಪಾಲಿಕೆಯ ವತಿಯಿಂದ ಕರ್ನಾಟಕ ಸರ್ಕಾರದ ಅನುದಾನಗಳು, 110 ಹಳ್ಳಿಗಳ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪಾಲಿಕೆಯ ಆಯವ್ಯಯದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ ಮೀಸಲಿಟ್ಟಿರುವ ಅನುದಾನ, ಪೂಜ್ಯ ಮಹಾಪೌರರು ಹಾಗೂ ಉಪ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮೀಸಲು ನಿಧಿಯಿಂದ ಕೈಗೊಳ್ಳುವ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸಲು ಆದೇಶಿಸಿರುತ್ತಾರೆ.

ಆದುದರಿಂದ ಮೇಲೆ ತಿಳಿಸಿರುವ ಕಾಮಗಾರಿಗಳನ್ನು ಮೇ//ಕೆಆರ್ಐಡಿಎಲ್ ಮುಖಾಂತರ ನಿರ್ವಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

19/10/16

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3.ವಿಶೇಷ ಆಯುಕ್ತರು (ಯೋಜನೆ/ಹಣಕಾಸು/ಘ.ತ್ಯಾ.ನಿ/ಕಲ್ಯಾಣ) ರವರ ಮಾಹಿತಿಗಾಗಿ ಸಲ್ಲಿಸಿದೆ.

ಮು.ತಿ.ಸೂ